ಮಹೇಶ್ ಹೆಗಡೆ, ಹೆಗ್ಲೆ
*ಪ್ರೀತಿಯ ರಾಮ್, ನಿಮಗೆ ಗಂಭೀರತೆಯೇ ಜಾಸ್ತಿ, ಹಾಸ್ಯಪ್ರಜ್ಞೆ ನಾಸ್ತಿ. ಏನಂತೀರಾ?*



ಸರಿಯೇ. humour is a very serious business ಹೆಗಡೆಜೀ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸಾಲಗಾರರು, ಆದರೆ ಮಡದಿಯರು ಮಾತ್ರ ಕೋಟಿಕೋಟಿಗೆ ಒಡತಿಯರು. ಇದು ಹೇಗೆ ಸಾಧ್ಯ?*
ಮಡದಿಯರಷ್ಟೇ ಅಲ್ಲ, ರಾಧಿಕೆಯರೂ ಶ್ರೀಮಂತರೇ! ಕಳ್ಳದುಡ್ಡು ಎಂದಿಗೂ ಕನ್ಯಾರಾಶಿಗೇ ಮೀಸಲು!

ಕೇಶವ ಎಸ್. ಪೈ
*ಮಹಿಳೆಯರೇಕೆ ಹೆಚ್ಚು ಮಾತನಾಡುತ್ತಾರೆ?*
ಅಷ್ಟು ಮಾತನಾಡಿದರೆ ದಡ್ಡಗಂಡಿಗೆ ಇಷ್ಟಾದರೂ ತಿಳಿದೀತೆಂದು!

ಮಾಲತಿರಾಜು, ಬೆಂಗಳೂರು
*ಸಂನ್ಯಾಸಿ ಮೇಲೋ, ಸಂಸಾರಿ ಮೇಲೋ?*
ಇಬ್ಬರೂ mailಏ? ಎನಿತೋ ಬಾರಿ sum ಮತ್ತು sorry ಮಿಶ್ರಣವಾದ ಸಂಸಾರಿಯೇ ಮೇಲು!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.
*ಆಡಳಿತಪಕ್ಷದ ಎಲ್ಲಾ ವಿಧೇಯಕಗಳನ್ನೂ ವಿರೋಧಿಸುವ ವಿರೋಧಪಕ್ಷಗಳು ಯಾವ ವಿಧೇಯಕಕ್ಕೆ ಸಂಪೂರ್ಣ ಒಪ್ಪಿಗೆ ಕೊಡುತ್ತಾರೆ?*
ಸರ್ವಸಚಿವರ ಸಂಬಳ, ಭತ್ಯೆ ಏರಿಸುವ ವಿಧೇಯಕಕ್ಕೆ!

ಎಂ.ಎನ್.ಸೋಮಶೇಖರ್, ಮೈಸೂರು
*ವರದಕ್ಷಿಣೆ ಪಿಡುಗಿಗೆ ತೆರೆ ಎಳೆಯಲು ಒಂದು ಉತ್ತಮ ದಾರಿ ತಿಳಿಸಿ?*
ವಧುದಕ್ಷಿಣೆ ಜಾರಿಗೆ ತನ್ನಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಮೇಲ್ ಪಂಕ್ತಿಗೂ, ಫೀಮೇಲ್ ಪಂಕ್ತಿಗೂ ಏನಾದರೂ ಸಂಬಂಧವಿದೆಯೇ?*
e-mail ಪಂಕ್ತಿಗಳು!

## ಬಹುಮಾನಿತ ಪ್ರಶ್ನೆ

ಶಿವಮೊಗ್ಗ ರಮೇಶ್, ಮೈಸೂರು
*ನಟನಟಿಯರನ್ನು ಆದರ್ಶವಾಗಿಟ್ಟುಕೊಂಡರೆ ಬದುಕಿನಲ್ಲಿ ತಪ್ಪುದಾರಿ ಹಿಡಿಯುವುದೇ ಹೆಚ್ಚು ಎಂದು ನಟೀಮಣಿಯೊಬ್ಬರು ಹೇಳಿದ್ದಾರಲ್ಲಾ...?*
ಎನಿತೋ ಹುಡುಗರು ಚಿರಂಜೀವಿ ಆಗುವೆನೆಂದು ಹೋಗಿ ಬರಿದೇ ೧೦ ಜೀವಿಗಳಾಗಿಲ್ಲವೇ! ಸಟೆಯಲ್ಲ ನಟಿಯ ನುಡಿ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಗಣೇಶನ್ನ ಇಟ್ಟಿದ್ದೀರಾ ಎಂದು ಮಕ್ಕಳು ಮನೆಮನೆಗೂ ಬಂದು ಕೇಳುತ್ತಿದ್ದುದು ಸಂಪೂರ್ಣವಾಗಿ ಮರೆಯಾಗಿಬಿಟ್ಟಿದೆಯಲ್ಲಾ...?*
ಚರ್ಪು ತಿಂದರೆ ಇನ್‌ಫೆಕ್ಷನ್ ಆಗತ್ತೆ, ಹೋಗ್ಬೇಡ ಎಂಬ ಪೇರೆಂಟುಗಳ ಪಿರಿಪಿರಿಯ ನುಡಿಯೇ ಇದಕ್ಕೆ ಕಾರಣವಂತೆ!

ಸೊ.ನಾ.ಶ್ರೀಧರಮೂರ್ತಿ, ದಾವಣಗೆರೆ
*ಬ್ರಿಟಿಷರ ಹಿಂಸೆಗೆ ಗಾಂಧೀಜಿಯ ಅಹಿಂಸೆಯಂತೆ ಭಯೋತ್ಪಾದಕರ ಕುಕೃತ್ಯಕ್ಕೆ ಯಾವುದು ಸವಾಲಾಗಬಹುದು?*
ಸರ್ವಧರ್ಮಗಳ ಒಕ್ಕೂಟದಿಂದ ಸೂಕ್ತವಾದ ಅಭಯೋತ್ಪಾದನೆ!

ಗಾಯತ್ರಿ, ರಾಜಾಜಿನಗರ
*ಮದ್ಯದ ಅಮಲು ಸರ್ವನಾಶದ ಹೆಬ್ಬಾಗಿಲು; ಆದರೂ ಮದ್ಯದಂಗಡಿಗಳಲ್ಲಿ ಜನ ತುಂಬಿರುತ್ತಾರಲ್ಲಾ...?*
ದೇವನುಳಿಸುವನೋ ಇಲ್ಲವೋ ಎಂದು ಪರೀಕ್ಷಿಸಲು ಭಕ್ತನೊಬ್ಬ ಜಪ ಮಾಡುತ್ತ ರೈಲಿಗೆ ತಲೆ ಕೊಟ್ಟನಂತೆ! ಸಾವಿನ ಆಕರ್ಷಣೆ ಬದುಕಿನದ್ದಕ್ಕಿಂತಲೂ ತೀಕ್ಷ್ಣ!

ಡಿ.ಎಲ್.ನಾಗರಾಜ್, ಹರಪನಹಳ್ಳಿ
*ಮುಸ್ಲಿಮರು ಭಯೋತ್ಪಾದಕರು, ಕ್ರಿಶ್ಚಿಯನ್ನರು ಮತಾಂತರಿಗಳು, ಹಿಂದೂಗಳು...?*



ಕಲಾಂ ಭಯೋತ್ಪಾದಕರೆ? ಮದರ್ ತೆರೇಸಾ? ಒಳಿತಿನಂತೆಯೇ ಕೆಡುಕೂ ಜಾತ್ಯತೀತ.

ಎಂ.ಕೆ.ರವಿಕಾಂತ, ತುಮಕೂರು
*ನೂರಾರು ವರ್ಷದಿಂದ ಗಾಂಧಿಟೋಪಿ ಹಾಕಿಕೊಳ್ಳುತ್ತಿದ್ದ ಕಾಂಗ್ರೆಸ್ಸಿಗರು ಇನ್ನುಮುಂದೆ ಕ್ರಿಕೆಟಿಗರು ತೊಡುವಂತಹ ಟೋಪಿಗೆ ಬದಲಾದರಂತಲ್ಲ ಸಾರ್?*



ಟೋಪಿ ಹೊಸದು ಆದರೇನು, ದೋಷ ಅದುವೆ ಕಾಣ!

ಡಿ.ಎಸ್.ಪಂಕಜಸುಬ್ರಮಣ್ಯ
*ಜನಸಂಖ್ಯೆ ಹೇರಳ, ಹಣದುಬ್ಬರ ಹೆಚ್ಚಳ, ಸಾಮಾನುಗಳ ಬೆಲೆ ಹೆಚ್ಚಳ, ಸಚಿವರ ಸಂಬಳ ಹೆಚ್ಚಳ, ನಂತರ...?*
ಬಡಜನರ ಬಾಯಿಗೆ ಖಾಯಂ ಮುಚ್ಚಳ!

ಮಂಚಾಲಿ ಗುರುರಾಜಾಚಾರು, ಬಳ್ಳಾರಿ
*ವಯಸ್ಸಿನಲ್ಲಿ ತುಂಟಾಟ, ಪ್ರಾಯದಲ್ಲಿ ಚೆಲ್ಲಾಟ, ಮದುವೆ ಆದಮೇಲೆ?*
ಇವೆರಡಕ್ಕೂ ಟಾಟಾ!

ಜೆ.ಆರ್.ಆದಿನಾರಾಯಣಮುನಿ,ಆದಿವಾಲ
*ಭಾರತದಲ್ಲಿ ಗುಪ್ತಚರ ವೈಫಲ್ಯಗಳು ಮರುಕಳಿಸುತ್ತಲೇ ಇರುತ್ತವಲ್ಲಾ...?*
ಕುಟಿಲತೆಯ ಜಟಿಲತೆಗೆ ಚಟಲವಾದುದೇ ವಿಫಲತೆಗೆ ಕಾರಣವಂತೆ!

ಎಂ.ಶಿವಸ್ವಾಮಿ ಕರೋಹಟ್ಟಿಕರ್, ಬೆಂಗಳೂರು
*ಗಣೇಶನ ಹುಟ್ಟು ಎಂತಹ ಗುಟ್ಟನ್ನು ತಿಳಿಸಿದೆ?*
ಕಸದಿಂದ ಅರಸ ಎಂಬ ಗುಟ್ಟನ್ನು!

ಜಾಕಬ್ ಡಿಸೋಜ, ಕುರುವಳ್ಳಿ
*ದಿನ ಕಳೆದು ದಿನ ಹುಟ್ಟುವಾಗ ಹೊಸ ಪ್ರಶ್ನೆಗಳು ಹುಟ್ಟುತ್ತಲೇ ಇರುತ್ತವಲ್ಲಾ...?*
ಇಂತಹ ಅಂಕಣಗಳು ಇರಲೆಂಬ ಸದುದ್ದೇಶದಿಂದ ಅವು ಹುಟ್ಟುವುವಂತೆ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಹೆಣ್ಣನ್ನು ಮಕ್ಕಳನ್ನು ಹೆರುವ ಯಂತ್ರವೆನ್ನುತ್ತಾರೆ; ಗಂಡನ್ನು?*
ಆ ಯಂತ್ರದ ಸ್ಥಿತಿ, ಲಯವನ್ನು ನೋಡಿಕೊಳ್ಳುವ ಮೇಲ್ ಅಧಿಕಾರಿ!

■ ರಾಮ್